■ ವಿಶಾಖ ಎನ್.

# ಕಶ್ಯಪರ ಕಟುವ್ಯಂಗ್ಯ



ಅನುರಾಗ್ ಕಶ್ಯಪ್ ನಿಷ್ಠುರ ಮಾತಿನಿಂದ, ಕ್ರೌರ್ಯದ ಕಹಿಸತ್ಯ ಅರುಹುವ ಚಿತ್ರಗಳಿಂದ ಗುರುತಾದವರು. ಅವರು ಇತ್ತೀಚೆಗೆ ನೀಡಿದ ಸುದೀರ್ಘ ಸಂದರ್ಶನದ ಹಲವು ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು. ಅದರಲ್ಲಿ ಒಂದು ತುಣುಕು ಕಲಾತ್ಮಕ ಚಿತ್ರ ನಿರ್ಮಾಪಕರ ಕುರಿತದ್ದು.

'ಸಿನಿಮಾಗಳನ್ನು ಹಣಕ್ಕಾಗಿಯೇ ಮಾಡುವವರೇ ಹೆಚ್ಚು. ಅದರಲ್ಲಿ ವಹಿವಾಟು ಸಹಜ. ಆದರೆ, ಅದನ್ನು ಕಲಾಮಾಧ್ಯಮ ಎಂದು ಸಿನಿಮಾಗಳನ್ನು ಮಾಡುವವರೂ ಇದ್ದಾರೆ. ಅವರ ಸಿನಿಮಾ ಕೃತಿಗಳು ಚೆನ್ನಾಗಿರುತ್ತವೆ. ಯಾರಾದ್ದಾದರೂ ಸಿನಿಮಾ ನನಗೆ ಹಿಡಿಸಿದರೆ ಮೆಚ್ಚಿ ಮಾತನಾಡುವುದು ನನ್ನ ಸ್ವಭಾವ. ಆದರೆ, ಅಂಥ ನಿರ್ದೇಶಕರ ಜತೆ ಐದು ನಿಮಿಷ ಮಾತನಾಡುವುದೂ ಕಷ್ಟ. ತಮ್ಮನ್ನು ತಾವೇ ಶ್ರೇಷ್ಠ ಎಂಬ ಮನೋಭಾವ ಅವರ ತಲೆಯಲ್ಲಿ ಹುತ್ತಗಟ್ಟಿರುತ್ತದೆ. ಇಂಥವರನ್ನೆಲ್ಲ ಒಂದು ಕೋಣೆಯೊಳಗೆ ಕೂಡಿಹಾಕಿದರೆ, ಎಲ್ಲರ ಸ್ವಪ್ರತಿಷ್ಠೆಯ ಮಾತಿನಿಂದಲೇ ದೊಡ್ಡ ಸ್ಫೋಟವಾಗುವ ಸಾಧ್ಯತೆ ಇದೆ' ಎಂದು ಕಶ್ಯಪ್ ವ್ಯಂಗ್ಯವಾಡಿದ್ದಾರೆ.

'ಗರುಡ ಗಮನ ವೃಷಭ ವಾಹನ' ಕನ್ನಡ ಸಿನಿಮಾ ಬಂದಾಗ ಇದೇ ಕಶ್ಯಪ್ ಮೆಚ್ಚಿಕೊಂಡಿದ್ದರು. ಮಲಯಾಳಂ ಚಿತ್ರ ನಿರ್ದೇಶಕ ಲಿಜೋ ಜೋಸೆಫ್ ಪೆಲಿಸರಿಯ ಚಿತ್ರಕೃತಿಗಳ ತನ್ನತನವನ್ನು ಕೊಂಡಾಡಿದ್ದರು. ಈಗ ಅವರು ಸಾಮಾನ್ಯೀಕರಿಸಿ ಆಡಿರುವ ಮಾತು ಕೆಲವು ಕಲಾತ್ಮಕ ಚಿತ್ರ ನಿರ್ದೇಶಕರಲ್ಲಿ ಕೋಪ ತರಿಸಿದ್ದರೂ ಅಚ್ಚರಿ ಇಲ್ಲ. ■

# ನಷ್ಟದ ಭಾರ ಹಗುರಾಗಿಸಿದ ಅಮೀರ್

ನಾಲ್ಕು ವರ್ಷಗಳ ಶ್ರಮ. ಹದಿನೈದು ವರ್ಷಗಳ ಹಿಂದಿನಿಂದ ನಡೆದಿದ್ದ ಪ್ರಕ್ರಿಯೆ. ಮೂಲ ಚಿತ್ರದ ಹಕ್ಕು ಪಡೆದುಕೊಂಡು ರೀಮೇಕ್ ಮಾಡಲು ಹೆಣಗಾಡಿದ್ದು... ಇವೆಲ್ಲವೂ ಈಗ ಹೊಳೆಯಲ್ಲಿ ತೊಳೆದ ಹುಣಸೆಯಂತಾಗಿದೆ. ನಟ ಅಮೀರ್ ಖಾನ್ ಅಭಿನಯಿಸಿದ್ದ 'ಲಾಲ್ ಸಿಂಗ್ ಚಡ್ಡಾ' ಎಲ್ಲ ಬಾಬ್ತುಗಳ ಲೆಕ್ಕಾಚಾರದ ನಂತರ ನೂರು ಕೋಟಿ ರೂಪಾಯಿ ಲುಕ್ಸಾನನ್ನು ತಂದೊಡ್ಡಿದೆ. ಅದರ ಹೊಣೆಯನ್ನು ಖುದ್ದು ಅಮೀರ್ ಹೊತ್ತಿದ್ದು, ತಮ್ಮ ಸಂಭಾವನೆಯನ್ನು ಪಡೆಯದೇ ಇರಲು ನಿರ್ಧರಿಸಿರುವುದು ಗಮನಾರ್ಹ ಸಂಗತಿ.

ವಯಕಾಂ 18 ಚಿತ್ರ ನಿರ್ಮಾಣ ಸಂಸ್ಥೆಯು ಈ ಚಿತ್ರಕ್ಕೆ ಬಂಡವಾಳ ಹೂಡಿತ್ತು. ಅಮೀರ್ ಸಂಭಾವನೆಯನ್ನು ನೀಡಿದ್ದಿದ್ದರೆ ನೂರು ಕೋಟಿಯಷ್ಟು ನಷ್ಟವನ್ನು ಈ ಸಂಸ್ಥೆ ಅನುಭವಿಸುವುದು ನಿಶ್ಚಿತವಿತ್ತು. ಅಮೀರ್ ತಾವು ಸಂಭಾವನೆ ಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದು, ಕಂಪನಿಯ ನಷ್ಟದ ಭಾರ ಸಾಕಷ್ಟು ಕಡಿಮೆಯಾಗಲಿದೆ. 'ಮಿಸ್ಟರ್ ಪರ್ಫೆಕ್ಟ್' ಎಂದೇ ಚಿತ್ರರಂಗದಲ್ಲಿ ಹೆಸರಾಗಿದ್ದ ಅಮೀರ್ ದೇಶದಲ್ಲಿನ ಕೆಲವರ ಅಸಹನೆಯನ್ನು ಕಂಡು, ಇಲ್ಲಿ ವಾಸಿಸುವುದು ಸುರಕ್ಷಿತ ಎಂದು ಅನಿಸುತ್ತಿಲ್ಲ ಎಂದು ವರ್ಷಗಳ ಹಿಂದೆ ಪ್ರತಿಕ್ರಿಯಿಸಿದ್ದೇ ಅವರಿಗೀಗ ಮುಳುವಾಯಿತು ಎಂದೆಲ್ಲ ವಿಶ್ಲೇಷಣೆ ನಡೆಯುತ್ತಿದೆ. 'ಫಾರೆಸ್ಟ್ ಗಂಪ್' ಅಮೆರಿಕನ್ ಚಿತ್ರದಲ್ಲಿ ನಾಯಕನಾಗಿದ್ದ ಸೈನಿಕ ಯುದ್ಧದ ಸಂದರ್ಭದಲ್ಲಿ ತನ್ನ ಹಿರಿಯ ಅಧಿಕಾರಿಯ ಜೀವ ಉಳಿಸಿದ ದೃಶ್ಯ ಇತ್ತು. ಅದನ್ನು ಕಾರ್ಗಿಲ್ ಯುದ್ಧದ ಸಂದರ್ಭಕ್ಕೆ ಒಗ್ಗಿಸಿ, ಬದಲಿಸಿದ 'ಲಾಲ್ ಸಿಂಗ್ ಚಡ್ಡಾ'ದಲ್ಲಿ ಪಾಕಿಸ್ತಾನದ ಯೋಧನನ್ನು ನಾಯಕ ಬಚಾವು ಮಾಡುವ ದೃಶ್ಯವಿದೆ. ಇದನ್ನೂ ಕೆಲವರು ಟೀಕಿಸಿದ್ದಾರೆ.



'ಬಾಯ್ಕಾಟ್ ಲಾಲ್ ಸಿಂಗ್ ಚಡ್ಡಾ' ಎಂಬ ಸಾಮಾಜಿಕ ಜಾಲತಾಣದ ಅಭಿಯಾನ ಫಲನೀಡಿದೆ ಎಂದೂ ಕೆಲವರು ಈ ಸಂದರ್ಭದಲ್ಲಿ ವಾಚ್ಯವಾಗಿ ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಎಲ್ಲ ವಿದ್ಯಮಾನಗಳ ನಂತರ ಅಮೀರ್ ನಷ್ಟದ ಹೊಣೆ ಹೊತ್ತು ಇಷ್ಟು ಸುದೀರ್ಘ ಅವಧಿಯ ಕೆಲಸದ ಸಂಭಾವನೆ ತೆಗೆದುಕೊಳ್ಳದೆ ಇರುವುದು ಶ್ಲಾಘನೀಯ ಎನ್ನುತ್ತಿರುವವರೂ ಇದ್ದಾರೆ.

ಪೂರಿ ಜಗನ್ನಾಥ್ ನಿರ್ದೇಶನದ 'ಲೈಗರ್' ಕೂಡ ನಿರೀಕ್ಷಿತ ಯಶಸ್ಸನ್ನು ಕಾಣಲಿಲ್ಲ. ನಾಯಕ ವಿಜಯ್ ದೇವರಕೊಂಡ ಧಿಮಾಕಿನ ಸ್ವಭಾವದವರು ಎಂದು ಮುಂಬೈನ ಮರಾಠಾ ಮಂದಿರ ಚಿತ್ರಮಂದಿರದ ಮಾಲೀಕರು ಕೂಡ ಟೀಕಿಸಿದ್ದರು. ವಿಜಯ್ ಖುದ್ದು ಆ ಚಿತ್ರಮಂದಿರಕ್ಕೆ ತೆರಳಿ, ಮಾಲೀಕರ ಕಾಲಿಗೆ ಬಿದ್ದು ತಮ್ಮದು ಅಂತಹ ಸ್ವಭಾವ ಅಲ್ಲ ಎಂದು ಸ್ಪಷ್ಟನೆ ನೀಡಿ ಬಂದರು. ■